## NOTICE OF ADJOURNMENT MOTION BY Sri M. S. KRISHNAN

Mr. DEPUTY SPEAKER.—I have received a notice of adjournment with regard to drinking water in Bangalore. It is not a matter of recent occurrence. It is a continuing process and I withhold my consent. The notice is disallowed.

Sri K. H.PATIL.—I raise a question of privilege.

Mr. DEPUTY SPEAKER.—The member will send it in writing.

Sri K. H. PATIL.—It need not be. It can be brought in the course of the discussion here.

*(Interruptions)*

Mr. DEPUTY SPEAKER.—The Reporters need not take down the proceedings.

* * * *

Sri D. M. SIDDIAH (Belegere).—I raise a point of order. The hon'ble members of this House have raised some relevant points regarding the enquiry to be conducted regarding the properties made by Ministers, ex-ministers, Congress Presidents and General Secretaries. Some valuable suggestions have been given by Sri Channabasappa and others and the Chief Minister has given a suitable reply and assured that suitable action that is necessary will be taken, in order to fulfil the important task before the country. When this is done, can discussion go on like this?

Mr. DEPUTY SPEAKER.—There is no discussion.

ಶ್ರೀ ಬಿ. ಭಾಸ್ಕರ ಶೆಟ್ಟಿ.—ಒಂದು ಕ್ರಿಯಾಲೋಪ ಸ್ವಾಮಿ, ಈಗ ಮಾನ್ಯ ಮುಖ್ಯಮಂತ್ರಿಯವರು ಒಂದು ಹೇಳಿಕೆಯನ್ನು ಕೊಡುತ್ತಾ.....

ಉಪಾಧ್ಯಕ್ಷರು.—ಯಾವ ರೂಲ್ ಪ್ರಕಾರ ಕ್ರಿಯಾಲೋಪ?

ಶ್ರೀ ಬಿ. ಭಾಸ್ಕರ ಶೆಟ್ಟಿ.—ರೂಲ್ ನಂ. 311 ಪ್ರಕಾರ ಸ್ವಾಮಿ. ಮಾನ್ಯ ಮುಖ್ಯ ಮಂತ್ರಿಯವರು ಹೇಳಿಕೆ ಕೊಡುತ್ತಾ ಹೇಳಿದರು, ಬಾಕಿಯವರಿಗೆರ್ಲಾ, ಅಂದರೆ, ಮಂತ್ರಿಗಳಿಗೆ, ಹಳೆಯ ಮಂತ್ರಿಗಳಿಗೆ, ಕಾಂಗ್ರೆಸ್ ಅಧ್ಯಕ್ಷರಿಗೆ, ಸೆಕ್ರೆಟರಿಗಳಿಗೆ, ಎರ್ಲಾ ಹಿಂದೆ ಏನಾದರೂ ಭ್ರಷ್ಟಾಚಾರ, ಲಂಚ ನಡೆದಿದ್ದರೆ, ಅದನ್ನು ಎನ್‌ಕ್ವಾಯರಿ ಮಾಡಿಸುತ್ತೇನೆ, ಆಸ್ತಿಪಾಸ್ತಿಗಳನ್ನು ಕೇಳುವುದಕ್ಕೋ ಸ್ಕರ ನೋಟೀಸು ಕೊಡುತ್ತೇನೆ ಎಂದು. ಆದರೆ ಈಗ ಮಾನ್ಯ ಮುಖ್ಯಮಂತ್ರಿಯವರ ಮೇಲೆ ಆಪಾದನೆ ಜಾಸ್ತಿಯಾಗಿರುವಾಗ ಅವರಿಗೆ ನೋಟೀಸ್ ಕೊಡುವವರು ಯಾರು ?

Mr. DEPUTY SPEAKER.—There is no substance in it.

ಶ್ರೀ ಟಿ. ಆರ್. ಶಾಮಣ್ಣ.—ನಾನು ಒಂದು ಅಡ್ಜರ್ನ್‌ಮೆಂಟ್ ಮೋಶನ್ ಕಳಿಸಿದ್ದೆ. ಅದನ್ನು ಡಿಸ್ ಅಲೋ ಮಾಡತಕ್ಕದು, ಅದು ಜನತೆಯ ಹಿತದೃಷ್ಟಿಯಿಂದ, ತಮಗೆ ಅಧಿಕಾರವಿಲ್ಲವೆಂದು ನಾನು ತಿಳಿದುಕೊಂಡಿದ್ದೇನೆ. ಏಕೆಂದರೆ ಇದು 15 ಲಕ್ಷ ಪ್ರಜೆಗಳಿಗೆ ಸೇರಿದಂತಹ ಪ್ರಶ್ನೆಯಾಗಿದೆ.

ಶ್ರೀ ಪಾಟಾಳ್ ನಾಗರಾಜ್.—ಸ್ವಾಮಿ ಮಾನ್ಯ ಶಾಮಣ್ಣನವರು ಒಂದು ನಿಲುವಳಿ ನೂಚನೆಯನ್ನು ಕಳಿಸಿದ್ದಾರೆ.....

ಶ್ರೀ ಎಸ್. ಎ. ಅಗ್ನಿಹೋತ್ರಿ (ಧಾರವಾಡ ಗ್ರಾಮಾಂತರ).—ಒನ್‌ಪಾಯಿಂಟ್‌ಆಫ್ ಆರ್ಡರ್: ಸಭಾಪತಿಯವರೇ, ಈಗ ಮಾನ್ಯಸಭೆಯಲ್ಲಿ ಬರುವಾಗ ಮಾನ್ಯ ಸದಸ್ಯರುಗಳಾದ ಶಾಮಣ್ಣನವರು ಪಾಟಾಳ ನಾಗರಾಜ್ ಮುಂತಾದವರು, ಒಂದು ಬ್ಯಾಜ್, ಎಲ್ಲಾ ಹಾಕಿಕೊಂಡು ಬಂದಿರುವುದನ್ನು

****Matter not recorded as ordered by the Chair.

(ಶ್ರೀ ಎಸ್. ಎ. ಅಗ್ನಿಹೋತ್ರಿ)

ನೋಡಿದರೆ ನರ್ಕಸ್ ಅಡ್ಜ್ಯೂರ್ನ್ಮೆಂಟ್ ಮಾಡುವುದಕ್ಕೆ ಬಂದ ಹಾಗೆ ಕಾಣುತ್ತದೆ. ಇದನ್ನು ಒಂದು ವೇಳೆ ಮುಂಜೂರು ಮಾಡಿದರೆ, ಇನ್ನೊಂದು ನಲ ಬೇರೆ ಸಾಮಾನುಗಳನ್ನೂ ಕೆಲವರು ತರಬಹುದು. ದಯವಿಟ್ಟು ಇದನ್ನು ಬಂದ್ ಮಾಡಬೇಕೆಂದು ವಿನಂತಿಮಾಡಿಕೊಳ್ಳುತ್ತೇನೆ.

ಉಪಾಧ್ಯಕ್ಷರು.—ಈಗ ಮಾನ್ಯ ಮುಖ್ಯ ಮಂತ್ರಿಗಳು ಈ ವಿಷಯದಲ್ಲಿ ಹೇಳುತ್ತಾರೆ. order, order.

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಮಂತ್ರಿಗಳು ಇಲ್ಲಿ ಹೇಳುವ ಮುನ್ನ ಒಂದೇ ಒಂದು ವಿಚಾರವನ್ನು ಇಲ್ಲಿ ಅರಿಕೆ ಮಾಡಬೇಕಾಗಿದೆ.

Mr. DEPUTY SPEAKER.—It is too much. The member was asked to retire. He had come again and is agian disturbing.

ಶ್ರೀ ವಾಟಾಳ್ ನಾಗರಾಜ್.—ಈ ಸಭೆಯಲ್ಲಿ ತಮ್ಮ ಮೂಲಕ ಒಂದು ವಿಚಾರ ಹೇಳಬೇಕಾಗಿದೆ. ಬೆಂಗಳೂರು ನಗರದಲ್ಲಿರುವ ಜನತೆಯ ಕಷ್ಟ ಹೇಳಬೇಕಾಗಿದೆ. ಅವರ ಮನೆಗಳಲ್ಲಿರುವ ನಲ್ಲಿಗಳ ಕನೆಕ್ಷನ್‌ಗಳನ್ನು ಕಟ್ ಮಾಡುತ್ತಿದ್ದಾರೆ.

Mr. DEPUTY SPEAKER.—The hon'ble Member will kindly retire from the House.

(*Sri Nagaraj did not retire*)

If the member does not go, he will have to be sent out.

ಶ್ರೀ ಎಚ್. ಬಿ. ಹ್ವಾಲನಯ್ಯ (ಹಾಸನ).—ಇದೇನು ಸ್ವಾಮಿ, ಮಾತೆತ್ತಿದರೆ ರಿಚ್ಯೈರ್ ರಿಚ್ಯೈರ್ ಎಂದು ಹೇಳುತ್ತಿರುವುದು ? ಈ ತರಹ ಹೇಳುವುದನ್ನು ನೋಡಿದರೆ ಸದಸ್ಯರುಗಳಿಗೆ ತಾವು ಸರಿಯಾದ ರಕ್ಷಣೆ ಕೊಡುತ್ತಿಲ್ಲ ಎನ್ನುವ ಭಾವನೆ ಈಚೆಗೆ ಬರುತ್ತಿದೆ.

Mr. DEPUTY SPEAKER.—Order, order. The hon'ble Member has been violating the rules. When I say, 'Order, Order,' the member is bound to resume his seat.

Sri VATAL NAGARAJ.—I sat down twice in obedience to your order.

Mr. DEPUTY SPEAKER.—The hon'ble Member will kindly retire from the House.

(*Sri Vatal Nagaraj however, did not retire*)

ಶ್ರೀ ಕೆ. ಎಚ್. ರಂಗನಾಥ್ (ಮೂಡಿಗೆರೆ).—ತಾವು ಸುಮ್ಮನೆ ಜೋರಾಗಿ ಆರ್ಡರ್ ಆರ್ಡರ್ ಎಂದರೆ ಹೇಗೆ ?

ಶ್ರೀ ವಾಟಾಳ್ ನಾಗರಾಜ್.—ಸ್ವಾಮಿ ? ನಾನು ತಮ್ಮಲ್ಲಿ ಒಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

Mr. DEPUTY SPEAKER.—Member should try to keep up dignity and decorum in the House.

ಶ್ರೀ ವಾಟಾಳ್ ನಾಗರಾಜ್.—ಸ್ವಾಮೀ ಒಂದು ವಿಚಾರ ಇಲ್ಲಿ ಹೇಳಬೇಕಾಗಿದೆ.

ಶ್ರೀ ಕೆ. ಎಚ್. ರಂಗನಾಥ್.—ಸ್ವಾಮಿ, ತಾವು ಅನುಸರಿಸುತ್ತಿರುವ ನೀತಿಯನ್ನು ನೋಡಿದರೆ ಯಾವ ಸದಸ್ಯರಿಗೂ ಅವರು ಹೇಳುವ ಮಾತುಗಳಿಗೆ ಅವಕಾಶವನ್ನೇ ಕೊಡುತ್ತಿಲ್ಲ. ಇದರಿಂದ ನಮ್ಮ ಹಕ್ಕುಗಳಿಗೆ ಚ್ಯುತಿ ಬರುತ್ತದೆ ಎನ್ನುವ ಭಾವನೆ ಈಚೆಗೆ ಬಹಳ ಹೆಚ್ಚಾಗಿ ಕಂಡುಬರುತ್ತಿದೆ. ತಾವು ಸ್ವಲ್ಪ ಸದಸ್ಯರುಗಳು ಅವರ ಅಭಿಪ್ರಾಯಗಳನ್ನು ಹೇಳಲು ಅವಕಾಶ ಕೊಡಬೇಕು. ತಮಗೆ ಅಧಿಕಾರವಿದೆ ಎಂದು ಏನು ಬೇಕಾದರೂ ಮಾಡಬಹುದು ಎಂದು ಮಾಡುವುದು ಸರಿಯಾಗಿರುವುದಿಲ್ಲ.

ಉಪಾಧ್ಯಕ್ಷರು.—ಆ ರೀತಿ ಏನೂ ಇಲ್ಲ. ಮಾನ್ಯ ಸದಸ್ಯರು ಎಲ್ಲ ಕಾನೂನು ಹಾಗೂ ರೂಲ್ಸ್ ಗಳನ್ನು ತಿಳಿದುಕೊಂಡಿದ್ದಾರೆ. ಅದರಂತೆ ಮಾಡಬೇಕು.

ಶ್ರೀ ಕೆ. ಎಚ್. ರಂಗನಾಥ್.—ಇದನ್ನು ತಾವೂ ಸ್ವಲ್ಪ ವಿಚಾರ ಮಾಡಬೇಕು. ಪರಿಸ್ಥಿತಿ ಈಚೆಗೆ ಬಹಳ ಹದಗೆಟ್ಟಿದೆ. ಇಂತಹ ಪ್ರಸಂಗವನ್ನು ನಿರೂಪಿಸಲು ಬೇರೆ ಇನ್ನೇನಾದರೂ ಉಪಾಯವನ್ನು ಕಂಡುಹಿಡಿಯಬೇಕಾಗುತ್ತದೆ.

Mr. DEPUTY SPEAKER.—If the member violates the rules like this I am bound to enforce the rules.

ಶ್ರೀ ಮಹದೇವ್ ಜಿ. ಬಣಕಾರ (ಬ್ಯಾಡಗಿ).—ಸ್ವಾಮಿ, ತಾವು ಸ್ವಲ್ಪ ಸಾವಧಾನದಿಂದ ಇರಬೇಕು. ಮಾನ್ಯ ಮುಖ್ಯ ಮಂತ್ರಿಗಳು ಈ ಸಭೆಯಲ್ಲಿ ನಮಗೆ ಯಾವಾಗ ಬೇಕು ಎಂದರೆ ಆಗ ಸಿಗುತ್ತಿಲ್ಲ. ಮತ್ತು ಅವರು ಯಾವ ಹೊತ್ತಿಗೆ ಬರುತ್ತಾರೆ ಎನ್ನುವುದನ್ನೂ ಹೇಳುವುದಕ್ಕಾಗುವುದಿಲ್ಲ. ಇಂದು ಮಾನ್ಯ ಮುಖ್ಯ ಮಂತ್ರಿಗಳು ಇಲ್ಲಿರುವುದರಿಂದ ಮಾನ್ಯ ಸದಸ್ಯರುಗಳು ಅವರಿಂದ ನೀರಿನ ಬಗ್ಗೆ ವಿಚಾರ ಅರಿತುಕೊಳ್ಳಲು ಅಭಿಪ್ರಾಪ್ತಿಯುಳ್ಳವರಾಗಿದ್ದಾರೆ ಎನ್ನುವುದು ಅವರು ಹೇಳುವ ವಿಚಾರಗಳಿಂದ ಗೊತ್ತಾಗುತ್ತದೆ. ಇದರಿಂದ ಅವರು ಹೇಳುವ ಮಾತುಗಳಿಗೆ ಅವಕಾಶ ಕೊಡದೇ ಹೋದರೆ ಸದನ್ಯತ್ವದ ಹಕ್ಕಿಗೆ ಚ್ಯುತಿ ಬರುತ್ತದೆ ಎನ್ನುವ ಭಾವನೆ ಮೂಡಿಬರುತ್ತದೆ. ಅವರ ಅಭಿಪ್ರಾಯಗಳನ್ನು ಮೊದಲಿಗೆ ಹೇಳಬೇಕು ಎನ್ನುವುದು ಅವರ ಆಸೆಯಾಗಿದೆ.

ಉಪಾಧ್ಯಕ್ಷರು.—ಅವರು ಹೇಳುವುದಕ್ಕೆ ಬಿಡುತ್ತಿಲ್ಲ. ಆದರೆ ಮಾನ್ಯ ಸದಸ್ಯರು ಇಲ್ಲಿ ನಡೆಯುವ ಕಾರ್ಯಕರಾಪಗಳಿಗೆ ಅಡ್ಡಿ ಮಾಡುತ್ತಿದ್ದಾರೆ.

ಶ್ರೀ ಮಹದೇವ ಜಿ. ಬಣಕಾರ.—ದಿನವೆಲ್ಲ ತಾವು ಆರ್ಡರ್ ಆರ್ಡರ್ ಎಂದು ಹೇಳಿ ಆ ನಂತರ ರಿಟೈರ್ ಎಂದು ಹೇಳಿದರೆ ಮಾನ್ಯ ಸದಸ್ಯರಿಗೆ ಅಗೌರವ ಮಾಡಿದಂತಾಗುತ್ತದೆ.

Sri M. S. KRISHNAN.—I have only a request to make.

Mr. DEPUTY SPEAKER.—The member will please take his seat.

(*The Chief Minister rose to speak*)

Sri M. S. KRISHNAN.—Sir, can you not allow me one minute's time before the Hon'ble Chief Minister speaks? I am not questioning your authority. So far as the water problem is concerned, nothing has been solved. My request is that at least the disconnections should be stopped.

ಶ್ರೀ ಆಜೀಜ್ ಶೇಟ್ (ನರಸಿಂಹರಾಜ).—ಸ್ವಾಮಿ, ಒಂದು ವಿಷಯವನ್ನು ತಮ್ಮಿಂದ ಇಲ್ಲಿ ತಿಳಿದುಕೊಳ್ಳಬೇಕಾಗಿದೆ. ಸಾಮಾನ್ಯವಾಗಿ ಸದಸ್ಯರುಗಳು ಇಲ್ಲಿ ನಮಸ್ಕಾರಕ್ಕೆ ಮನವಿಮಾಡಿಕೊಳ್ಳಬೇಕಾಗಿದ್ದರೆ ತಮ್ಮ ಮೂಲಕ ಅವರ ಅಭಿಪ್ರಾಯಗಳನ್ನು ಹೇಳಬೇಕಾಗಿದೆ. ಆ ರೀತಿ ಮಾತನಾಡಬಾರದು ಎಂದು ತಮಗೆ ಎಲ್ಲಿಯಾದರೂ ಹೇಳಿದ್ದಾರೆಯೇ ಎಂದು ನಾನು ಇಲ್ಲಿ ತಮ್ಮನ್ನು ಕೇಳಬೇಕಾಗಿದೆ. ಮಂತ್ರಿಗಳು ಈ ಸಭೆಯ ಎಲ್ಲ ಸದಸ್ಯರು ಹೇಳುವ ಮಾತುಗಳಿಗೂ ಮನ್ನಣೆ ಕೊಡಬೇಕು ಮತ್ತು ಸದಸ್ಯರುಗಳು ಅವರ ಅಭಿಪ್ರಾಯಗಳನ್ನು ಹೇಳುವುದೂ ಅವರ ಕರ್ತವ್ಯ. ಮಾನ್ಯ ಮಂತ್ರಿಗಳು ಇರುವುದು ಇಲ್ಲಿ ಜನರ ಪ್ರತಿನಿಧಿಗಳಾಗಿ ಬಂದಿರುವ ನಮ್ಮಂತಹ ಸದಸ್ಯರುಗಳ ಅಭಿಪ್ರಾಯಗಳನ್ನು ಕೇಳಿಕೊಂಡು ತಕ್ಕ ಕ್ರಮಗಳನ್ನು ಮಾಡಬೇಕು. ಹಾಗೆ ಹೇಳುವಾಗ ಇಲ್ಲಿ ಬಹಳ ದೊಡ್ಡ ಧ್ವನಿಯಲ್ಲಿ 'ಆರ್ಡರ್, ಆರ್ಡರ್' ಎಂದು ಹೇಳಿದರೆ ಹೇಗೆ? ನಮಗೇನು ಬಾಯಿ ಇಲ್ಲವೇ? ಬುದ್ಧಿ ಇಲ್ಲವೇ? ನಾವು ಹೇಳಿದುದಕ್ಕೆ ಮಂತ್ರಿಗಳಾಗಿರುವವರು ಉತ್ತರ ಕೊಡಲೇ ಬೇಕು.

Mr. DEPUTY SPEAKER.—The Reporters need not take down whatever he says further.

* * * *

ಉಪಾಧ್ಯಕ್ಷರು.—ಈಗ ಮುಖ್ಯ ಮಂತ್ರಿಗಳು ಕೆಲವು ವಿಚಾರಗಳನ್ನು ತಿಳಿಸುತ್ತಾರೆ.

---

*** Matter not recorded as ordered by the Chair.